# ಚಿರು
## ನೆನಪು ಚಿರಾಯು!

**ಮನೆಯವರ, ಅಭಿಮಾನಿಗಳ, ಸ್ನೇಹಿತರ, ತನ್ನವಳ ಹೃದಯ ಗೆದ್ದ 'ಚಿರಂಜೀವಿ' ಎಂಬ ಯುವಸಾಮ್ರಾಟನ ಹೃದಯ ಅದೇಕೋ ತುಂಬಾ ಬೇಗ ಸೋಲೊಪ್ಪಿಕೊಂಡಿತು.**

■ ಮಾಸ್ತಿ



ಹೀರೊ ಅಂದ್ರೆ ನೋಡಕ್ಕೆ ಚೆನ್ನಾಗಿರ್ಬೇಕು, ದೇಹ ಕಟ್ಟುಮಸ್ತಾಗಿರ್ಬೇಕು, ಡಾನ್ಸು ಫೈಟು ಸಖತ್ತಾಗಿ ಮಾಡ್ಬೇಕು, ಆ್ಯಕ್ಟಿಂಗು ಡೈಲಾಗು ಅಂತ ಬಂದಾಗ ಅದ್ಭುತವಾಗಿ ಅಭಿನಯಿಸಬೇಕು – ಇವೆಲ್ಲ ಸಿನಿಮಾಗಳಲ್ಲಿ ಅತ್ಯವಶ್ಯಕ ಮತ್ತು ಅನಿವಾರ್ಯವಾದ ಲಕ್ಷಣಗಳು. ಇದೆಲ್ಲ ಇದ್ದಾಗ ಅವನು ಹೀರೊ ಅನಿಸಿಕೊಳ್ತಾನೆ. ಆದರೆ ಸಿನಿಮಾ ಬಿಟ್ಟು ಹೊರಜಗತ್ತಲ್ಲೂ ಹೀರೊ ಅನ್ನಿಸ್ಕೋಳ್ಳೋದು ಇದೆಯಲ್ಲ, ಅದು ನಿಜಕ್ಕೂ ಸವಾಲಿನದ್ದು. ಇತ್ತೀಚೆಗೆ ನಮ್ಮನ್ನಗಲಿದ ನಟ ಚಿರಂಜೀವಿ ಸರ್ಜಾ ತೆರೆಯ ಮೇಲಷ್ಟೇ ಹೀರೊ ಆಗಿರಲಿಲ್ಲ, ನೈಜಬದುಕಿನಲ್ಲಿಯೂ ಹೀರೊ ಆಗಿದ್ದವರು.

ಮನೆಯವರ ಜೊತೆ ಅಕ್ಕರೆಯಿಂದ ಸಮಯ ಕಳೆಯುತ್ತಿದ್ದರು. ಸಹೋದರ ಧ್ರುವ ಸರ್ಜಾ ಸಹ ದೊಡ್ಡ ಸ್ಟಾರ್ ಆಗಿದ್ದರೂ ಅವರ ಜೊತೆ, ಅವರ ಅಭಿಮಾನಿಗಳ ಜೊತೆ ಅನ್ಯೋನ್ಯತೆಯಿಂದ ಇದ್ದರು. ದೊಡ್ಡ ಸ್ನೇಹಿತರ ಬಳಗದ ಸ್ನೇಹವನ್ನು ಆತ್ಮೀಯವಾಗಿ ನಿಭಾಯಿಸುತ್ತಿದ್ದರು. ನಿತ್ಯ ತಮ್ಮನ್ನು ಕಾಣಲು ಬರುವ ಅಭಿಮಾನಿಗಳನ್ನು ಆತ್ಮೀಯವಾಗಿ ಮಾತನಾಡಿಸಿ ಅವರುಗಳ ಜೊತೆ ಫೋಟೊ, ಸೆಲ್ಫಿಗಳನ್ನು ತೆಗೆಸಿಕೊಂಡು ಕಳಿಸುತ್ತಿದ್ದರು. ಕಷ್ಟದಲ್ಲಿದ್ದವರಿಗೆ ಕೈಲಾದ ಸಹಾಯ ಮಾಡುತ್ತಿದ್ದರು. ಅಸಿಸ್ಟೆಂಟು, ಡ್ರೈವರ್ರು ಅಂತ ಇರುವ ತನ್ನ ಆಪ್ತ ಸಿಬ್ಬಂದಿಯನ್ನು ಯಾವತ್ತೂ ಕೆಲಸದವರಂತೆ ನೋಡ್ತಿರ್ಲಿಲ್ಲ; ಮನೆಯವರ ಥರಾನೇ ನೋಡ್ಕೋತಿದ್ರು.

ಸರ್ಜಾ ಅನ್ನೋ ಸಿನಿಮಾ ಕುಟುಂಬದಿಂದ ಬಂದಿರೋದ್ರಿಂದ ಒಂದು ಜವಾಬ್ದಾರಿ ಅವರ ಮೇಲಿತ್ತು. ಯಾವತ್ತೂ ಅನವಶ್ಯಕವಾದ ವಿಚಾರಗಳಲ್ಲಿ ತಲೆಹಾಕಿ ಅಪವಾದಗಳನ್ನು ಮೈಮೇಲೆ ಎಳ್ಕೋತಿರ್ಲಿಲ್ಲ. ಚಿತ್ರೋದ್ಯಮದ ಹಿರಿಯ ನಿರ್ದೇಶಕರಿಗೆ, ನಟ–ನಟಿಯರಿಗೆ